

ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ "ವಿಶ್ವ ಯುವ ಕೌಶಲ್ಯ ದಿನಾಚರಣೆ" ಕಾರ್ಯಕ್ರಮದಲ್ಲಿ ಎನ್.ಆರ್.ಎಲ್.ಎಂ.ನ ವಿಶೇಷ ಕಾರ್ಯಕ್ರಮದ ಫಲಾನುಭವಿಗಳನ್ನು ಗೌರವಿಸುತ್ತಿರುವುದು.

# ವಿಶ್ವ ಯುವ ಕೌಶಲ್ಯ ದಿನಾಚರಣೆಯ ಮಹತ್ವ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ "ವಿಶ್ವ ಯುವ ಕೌಶಲ್ಯ ದಿನಾಚರಣೆ"ಯನ್ನು 14ನೇ ಜುಲೈ 2022ರಂದು ಬೆಂಗಳೂರಿನ ವಿಧಾನ ಸೌಧದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಬಾರಿಯ ಆಚರಣೆಯನ್ನು ಜಾಗತಿಕ ಮಟ್ಟದಲ್ಲಿ ಭವಿಷ್ಯಕ್ಕಾಗಿ ಯುವಕೌಶಲ್ಯಗಳ ರೂಪಾಂತರ ಎಂಬ ವಿಷಯದ ಮೇಲೆ ಕೇಂದ್ರೀಕರಿಸಲಾಗಿದ್ದು, ಈ ನಿಟ್ಟಿನಲ್ಲಿ ಇಲಾಖೆಯ ಹಲವು ಭವಿಷ್ಯಮುಖಿ ಯೋಜನೆಗಳಾದ ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್, ಅಮೃತ ಮಹೋತ್ಸವ ಮುನ್ನಡೆ, ಇ–ಕೌಶಲ್ಯ ಕಲಿಕೆ ನಿರ್ವಹಣಾ ವ್ಯವಸ್ಥೆ, ಹಾಗು ಇತರೆ ವಿನೂತನ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.



**ಕೌಶಲ್ಯ ಪ್ರದರ್ಶನದ ಸ್ಟಾಲ್‌ಗಳಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಯುವಜನತೆಯೊಂದಿಗೆ ಮಾತನಾಡಿದರು.**

ಡಾ. ಎಸ್. ಸೆಲ್ವಕುಮಾರ್ ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ ಇವರು ವಿಶ್ವ ಯುವ ಕೌಶಲ್ಯ ದಿನಾಚರಣೆಯ ಕಾರ್ಯಕ್ರಮಕ್ಕೆ ಎಲ್ಲರನ್ನು ಸ್ವಾಗತಿಸಿದರು.

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ 'ಒಂದು ಜಿಲ್ಲೆ, ಒಂದು ಕೌಶಲ್ಯ', ಯೋಜನೆಯ ಪರಿಕಲ್ಪನೆಯಡಿ ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್, ಅಮೃತ ಮಹೋತ್ಸವ ಮುನ್ನಡೆ, ಇ–ಕೌಶಲ್ಯ ಕಲಿಕೆ ನಿರ್ವಹಣಾ ವ್ಯವಸ್ಥೆ, ಹಾಗು ಇತರೆ ವಿನೂತನ ಉಪಕ್ರಮಗಳನ್ನು ಹಾಗೂ ಯೋಜನೆಗಳನ್ನು ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟಿಸಿದರು.

ಈ ಸಮಾರಂಭದಲ್ಲಿ ಸನ್ಮಾನ್ಯ ಡಾ. ಸಿ. ಎನ್. ಅಶ್ವಥನಾರಾಯಣ್, ಉನ್ನತ ಶಿಕ್ಷಣ, ಇಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಮತ್ತು ಜೀವನೋಪಾಯ ಇಲಾಖೆ, ಸಚಿವರು, ಶ್ರೀ ಮಂಜುನಾಥ ಪ್ರಸಾದ್ ಭಾ.ಆ.ಸೇ., ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಶ್ರೀಮತಿ ಜ್ಯೋತಿ ಕೆ., ಭಾ.ಆ.ಸೇ., ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ; ಕು. ಮಂಜುಶ್ರೀ ಎನ್., ಭಾ.ಆ.ಸೇ., ಮಿಷನ್ ನಿರ್ದೇಶಕರು, ಜೀವನೋಪಾಯ ಮಿಷನ್; ಶ್ರೀ ಅಶ್ವಿನ್ ಗೌಡ, ಭಾ.ಕಂ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ; ಶ್ರೀ ಎಚ್. ರಾಘವೇಂದ್ರ, ಐ.ಆರ್.ಪಿ.ಎಸ್., ವ್ಯವಸ್ಥಾಪಕ ನಿರ್ದೇಶಕರು, ಜಿ.ಟಿ.ಟಿ.ಸಿ.; ಹಾಗು ಶ್ರೀ ಬಸವರಾಜ ಎಂ. ಗೋಟೂರ್, ನಿರ್ದೇಶಕರು, ಸಿಡಾಕ್, ಮತ್ತು ಇತರೆ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸನ್ಮಾನ್ಯ ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರು ವಿಶ್ವ ಕೌಶಲ್ಯ ದಿನಾಚರಣೆಯ ಪ್ರಾಮುಖ್ಯತೆಯ ಕುರಿತು ಮಾತನಾಡುತ್ತ ಯುವಜನತೆಯಲ್ಲಿ ಕೌಶಲ್ಯಗಳು ಸಾಮಾನ್ಯ ಶಿಕ್ಷಣದೊಂದಿಗೆ, ವೃತ್ತಿಪರ ತರಬೇತಿಯ ಏಕೀಕರಣದ ಮೂಲಕ ಇಡೀ ದೇಶದಲ್ಲಿ ಕರ್ನಾಟಕವನ್ನು ಕೌಶಲ್ಯಗಳ ಶಕ್ತಿಕೇಂದ್ರವನ್ನಾಗಿ ಮಾಡುವ ಸರ್ಕಾರದ ಗುರಿಯನ್ನು ಹಂಚಿಕೊಂಡರು. ಕರ್ನಾಟಕದಲ್ಲಿ ಆರು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಐ.ಐ.ಟಿ.ಗಳ ದರ್ಜೆಗೆ ಏರಿಸಲು ಉನ್ನತೀಕರಣವನ್ನು ನಡೆಸಲಾಗುತ್ತಿದೆ ಎಂದು ಘೋಷಿಸಿದರು.

ಸನ್ಮಾನ್ಯ ಡಾ. ಸಿ. ಎನ್. ಅಶ್ವಥನಾರಾಯಣ್, ಇಲಾಖಾ ಸಚಿವರು ಸಭೆಯನ್ನುದ್ದೇಶಿಸಿ, ಕೌಶಲ್ಯಾಭಿವೃದ್ಧಿ ಇಲಾಖೆಯ ವಿನೂತನ, ಭವಿಷ್ಯ–ಮುಖಿ ಯೋಜನೆಗಳ ಕುರಿತು ಮಾತನಾಡುತ್ತಾ ಯುವ ಜನತೆಯಲ್ಲಿ ಉದ್ಯೋಗ ಹಾಗು ಉದ್ಯಮಶೀಲತೆಗಾಗಿ ಕೌಶಲ್ಯದ ಮಹತ್ವದ ಕುರಿತು ಅರಿವು ಮೂಡಿಸಲು ವಿಶ್ವ ಯುವ ಕೌಶಲ್ಯ ದಿನವನ್ನು ಪ್ರತಿ ವರ್ಷ ಜುಲೈ 15ರಂದು ಆಚರಿಸಲಾಗುತ್ತದೆ. ಸಂಪನ್ಮೂಲಗಳನ್ನು ಜಗತ್ತಿನಾದ್ಯಂತ ಕೌಶಲ್ಯ ವ್ಯವಸ್ಥೆಗಳ ಬಲವರ್ಧನೆಗೆ ಮೀಸಲಿಡಲು ಈ ಆಚರಣೆ ಉತ್ತಮ ಅವಕಾಶವಾಗಿದೆ ಎಂದರು.

ಇಲಾಖೆಯ ಪ್ರಮುಖ ಯೋಜನೆಗಳನ್ನು ಹಾಗು ಉಪಕ್ರಮಗಳನ್ನು ಬಿಂಬಿಸುವ ವಿಡಿಯೋವೊಂದನ್ನು ಪ್ರಸ್ತುತಪಡಿಸಲಾಯಿತು. ಇಂಡಿಯಾ ಸ್ಕಿಲ್ಸ್ 2021ನ ವಿಜೇತರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಇದರೊಂದಿಗೆ, 2024ರಲ್ಲಿ ನಡೆಯಲಿರುವ ವರ್ಲ್ಡ್




**ಮಾನ್ಯ ಸಚಿವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು.**

ಸ್ಕಿಲ್ಸ್ ಸ್ಪರ್ಧೆಗೆ ಆಯ್ಕೆಗಾಗಿ 2022-2023 ಸಾಲಿನಲ್ಲಿ ಆಯೋಜಿಸಲಾಗುತ್ತಿರುವ ವಲಯ, ರಾಜ್ಯ ಹಾಗು ರಾಷ್ಟ್ರೀಯ ಸ್ಪರ್ಧೆಗಳಿಗೆ ಗಣ್ಯರು ಚಾಲನೆ ನೀಡಿದರು. ವರ್ಲ್ಡ್ ಸ್ಕಿಲ್ಸ್‌ನ ಮ್ಯಾಸ್ಕಾಟ್ 'ಸ್ಕಿಲ್ಲಿ' ಗೆ ಈ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ಕೆ.ಎಸ್.ಡಿ.ಸಿ. ಆಯೋಜಿಸಿದ್ದ 'ಸ್ಕಿಲ್‌ತಾನ್' ಸ್ಪರ್ಧೆಯ ವಿಜೇತರಿಗೆ ಬಹುಮಾನಗಳನ್ನು ಗಣ್ಯರು ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಕೌಶಲ್ಯಗಳ ಪ್ರದರ್ಶನವನ್ನು ಕೂಡ ಆಯೋಜಿಸಲಾಗಿತ್ತು.

ಸಂಜೀವಿನಿ – ಕೆ.ಎಸ್.ಆರ್.ಎಲ್.ಪಿ.ಎಸ್. ಹಾಗು ಕೆ.ಎಸ್.ಡಿ.ಸಿ.ಯ ನಡುವೆ 25,000 ಮಹಿಳಾ ಉದ್ಯಮಿಗಳಿಗೆ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ಕೆ.ಎಸ್.ಡಿ.ಸಿಯ ಮುಖಾಂತರ ನೀಡುವ ಕುರಿತ ಒಪ್ಪಂದಗಳ ವಿನಿಮಯ ನಡೆಯಿತು. ಕೆ.ಎಸ್.ಡಿ.ಸಿ. ಹಾಗು ಮೈಕ್ರೋಸಾಫ್ಟ್ ನಡುವೆ ಡಿಜಿಟಲ್ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಕುರಿತು ಒಪ್ಪಂದಗಳ ವಿನಿಮಯ ನಡೆಯಿತು. ಐ.ಟಿ.ಐ. ಆಯುಕ್ತಾಲಯ ಹಾಗು ಇನ್ಫೋಸಿಸ್ ನಡುವೆ ಸ್ಪ್ರಿಂಗ್‌ಬೋರ್ಡ್ ಡಿಜಿಟಲ್ ಪ್ಲಾಟ್‌ಫಾರ್ಮ್‌ನ ಮೂಲಕ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ನೀಡುವ ಕುರಿತು ಒಪ್ಪಂದದ ವಿನಿಮಯ ನಡೆಯಿತು. ಅಲ್ಲದೆ ಜಿ.ಟಿ.ಟಿ.ಸಿ. ಹಾಗು ಟೊಯೋಟ ಕಿರ್ಲೋಸ್ಕರ್ ನಡುವೆ ಜಿ.ಟಿ.ಟಿ.ಸಿ. ಅಭ್ಯರ್ಥಿಗಳ on the Job ತರಬೇತಿಯ ಕುರಿತು ಒಪ್ಪಂದಗಳ ವಿನಿಮಯ ನಡೆಯಿತು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಅಡಿಯಲ್ಲಿ ವಾಹನ ಚಾಲನೆಯಲ್ಲಿ ತರಬೇತಿ ಪಡೆದ ಸ್ವಸಹಾಯ ಸಂಘಗಳ ಮಹಿಳೆಯರು ವೇದಿಕೆ ಮೇಲೆ ತಮ್ಮ ತರಬೇತಿಯ ಕುರಿತ ಅನುಭವಗಳನ್ನು ಹಂಚಿಕೊಂಡರು.

ಈ ಮಹಿಳೆಯರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳೊಡನೆ ಮಾತನಾಡುವ ಅವಕಾಶವನ್ನು ಸಹ ಕಲ್ಪಿಸಲಾಯಿತು. ಎನ್.ಆರ್.ಎಲ್.ಎಂ. ಅಡಿಯಲ್ಲಿ ಸಮರ್ಥನಂ ಟ್ರಸ್ಟ್‌ನ ಮೂಲಕ ವಿಕಲಚೇತನರಿಗೆ ರೂಪಿಸಿದ ವಿಶೇಷ ಕಾರ್ಯಕ್ರಮದ ಫಲಾನುಭವಿಗಳನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು.



**Beneficiaries of NRLM's special programme being honoured in World Youth Skills Day celebrations at Vidhana Soudha Banquet Hall, Bangalore.**

# Significance of World Youth Skills Day Celebrations

Skill Development, Entrepreneurship and Livelihood (SDEL) Department, Government of Karnataka organized the World Youth Skills Day 2022 celebrations at Vidhana Soudha in Bengaluru on 14 July 2022.

In line with this year's global theme of 'Transforming Youth Skills for the Future', the event saw the unveiling of several future-oriented initiatives of the Department. Many of the Karnataka Skill Development Corporation's (KSDC) upcoming programmes and initiatives such as One District One



**Hon'ble Chief Minister interacting with youth at the skill stalls on display**

Skill (ODOS), Karnataka Skill Connect Portal, Amrutha Mahotasava Munnade, and the E-Kaushalya LMS platform, were inaugurated by Shri Basavaraj S Bommai, the Honourable Chief Minister of Karnataka.

Dr C.N Ashwathnarayan, the Hon'ble Minister for Higher Education, IT&BT, Science &Technology and SDEL, Government of Karnataka; Dr S. Selvakumar, IAS, Principal Secretary to Govt, SDEL Dept and other Heads of Institutions under the SDEL department including Smt Jyothi K, IAS, Commissioner, Commissionerate of Industrial Training and Employment; Ms Manjushree N, IAS, Mission Director, Livelihood Mission; Sri Ashwin D Gowda, IRS, Managing Director, KSDC; Sri H Raghavendra, IRPS, Managing Director, Government Tool room and Training Centre (GTTC); and Sri Basavaraj M Gotur, Director (i/c), Centre for Entrepreneurship Development of Karnataka (CEDOK) and other dignitaries graced the event.

Speaking at the event, the Hon'ble Chief Minister emphasized the importance of skills among youth and shared the vision of the State Government to make Karnataka the powerhouse for skilling in the country through greater integration of vocational training with general education. He also remarked that six Government Engineering colleges in Karnataka are being upgraded on par with IITs. The Hon'ble Minister for SDEL addressed the audience on the innovative and future-oriented initiatives from the Department. Dr S. Selvakumar, in his address, shed light on the significance of World Youth Skills Day for the youth of Karnataka. A video encapsulating the major schemes and initiatives of the institutions of the Department was presented at the event.




**Hon'ble Minister addressing the gathering.**

Winners of India Skills 2021 were honoured, while the Zonal, State and National competitions for the World Skills competition 2024 were flagged off. The mascot for World Skills 'Skilli' was also launched at the event. Winners of KSDC's Skillathon competition also received prizes from the dignitaries. Additionally, the event hosted a display of the skills of youth in various trades from across the state.

Sanjeevini- KSRLPS exchanged MoU with KSDC for providing Entrepreneurship development training to 25,000 women across Karnataka. KSDC signed MoU with Microsoft for digital skilling interventions targeted at underserved youth. The Commissionerate of IT&E exchanged MoU with Infosys for the utilization of their Springboard platform for the digital skilling of students. GTTC exchanged MoU with Toyota Kirloskar for conducting on-the-job training for their trainees.

Members from women Self Help Groups under the National Rural Livelihood Mission (NRLM), who were imparted training in driving, shared their experience on stage and interacted with the Hon'ble Chief Minister. Beneficiaries of a programme by NRLM implemented through the Samarthanam Trust for the Specially abled were felicitated by the dignitaries.

World Youth Skills Day is celebrated on 15 July every year to highlight the strategic significance of skills in youth for employment and entrepreneurship. It is a global opportunity for all the stakeholders to recommit their resources for strengthening the skilling ecosystem worldwide.